ಸಾಕ್ಷಿಯನ್ನು ಈ ದಿನ ದಿನಾಂಕ 05–06–2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

**ಮುಖ್ಯ ವಿಚಾರಣೆಃ ವಾದಿ ಪರವಾಗಿ ಶ್ರೀ. ಸಿ ಎಸ್ ಸಿ ವಕೀಲರಿಂದಃ**

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯ ಕುರಿತು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಕುರಿತು ಸಲ್ಲಿಸಿರುತ್ತೇನೆ, ಅದರಲ್ಲಿ ಬರೆದಿರುವ ಎಲ್ಲ ಸಂಗತಿಗಳು ನನ್ನ ಜ್ಞಾನ ಮತ್ತು ತಿಳುವಳಿಕೆ ಮೇರೆಗೆ ನಿಜ ಇದ್ದು , ಅದರಲ್ಲಿರುವ ಸಹಿ ನಾನೇ ಮಾಡಿರುತ್ತೇನೆ.

ನಾನು ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ಹಾಜರುಪಡಿಸಿರುವ ದಾಖಲೆಗಳಲ್ಲಿ ಬೆಳವಡಿ ಗ್ರಾಮ ಸರ್ವೆ ನಂ. 18/1+2/ಕ+1 + 2/ಬ +1+2 ನೇದ್ದರ ಪಹಣಿ ಪತ್ರಿಕೆ ನಿಪಿ – 1 ಎಂದು, ಬೆಳವಡಿ ಗ್ರಾಮ ಪಂಚಾಯತಿ ಆಸ್ತಿ ನಂ. 258/1 ನೇದ್ದರ ಆಸ್ತಿ ದೃಡಿಕರಣ ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ–2 ಎಂದು, ಅದೇ ಗ್ರಾಮ ಪಂಚಾಯತಿ ಆಸ್ತಿ ನಂ. 256 ನೇದ್ದರ ಆಸ್ತಿ ದೃಡಿಕರಣ ಪತ್ರಮ್ನು ಹಾಜರು ಪಡಿಸಿದು ಅನ್ನು ನಿಪಿ–3 ಎಂದು, ಅದೇ ಗ್ರಾಮ ಪಂಚಾಯತ ಆಸ್ತಿ ನಂ. 255 ನೇದ್ದರ ಆಸ್ತಿಯ ನೇದ್ದರ ಆಸ್ತಿ ದೃಡಿಕರಣ ಪತ್ರ ಹಾಜರು ಪಡಿಸಿದ್ದು ಅದನ್ನು ನಿಪಿ–4 ಎಂದು, ಅದೇ ಗ್ರಾಮ ಪಂಚಾಯತ ಆಸ್ತಿ 178 ನೇದ್ದರ ಆಸ್ತಿ ದೃಡಿಕರಣ ಪತ್ರ ನಿಪಿ–5 ಎಂದು ಗುರುತಿಸಲಾಯಿತು.

ಆದ್ದರಿಂದ, ವಾದ ಪತ್ರದಲ್ಲಿ ಕೋರಿದಂತೆ ದಾವೆ ಡಿಕ್ರಿ ಮಾಡಲು ಪ್ರಾರ್ಥಿಸುತ್ತೇನೆ.

**ಪಾಟೀ ಸವಾಲುಃ 1** ಮತ್ತು 4 ನೇ ಪ್ರತಿವಾದಿ ಪರ ಪ್ರಾಕ್ಷಿ ವಕೀಲರು ಕಾಲಾವಕಾಶ ಕೋರಿದ್ದರಿಂದ, ಕಾಲಾವಕಾಶ ನೀಡಿ ಮುಂದೂಡಲಾಯಿತು.

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.

ಪ್ರತಿವಾದಿ ಮತ್ತು ಅವರ ಪರ ವಕೀಲರನ್ನು ಕೂಗಿಸಲಾಗಿ ಯಾರು ಹಾಜರಾಗದೇ ಇರುವ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪಾಟೀ ಸವಾಲುಃ ಪ್ರತಿವಾದಿಯರು ಏಕಪಕ್ಷಿಯ ಇರುತ್ತಾರೆ. ಹೀಗಾಗಿ ಪಾಟೀ ಸವಾಲು ಇರುವುದಿಲ್ಲ ಅಂತಾ ತೆಗೆದುಕೊಳ್ಳಲಾಗಿದೆ .

ಪಾಟೀ ಸವಾಲುಃ 2 ನೇ ಪ್ರತಿವಾದಿ ಮತ್ತು ಅವರ ಪರ ವಕೀಲರನ್ನು ಕೂಗಿಸಲಾಗಿ ಗೈರು ಹಾಜರು ಇರುತ್ತಾರೆ. ಆದ್ದರಿಂದ 2 ನೇ ಪ್ರತಿವಾದಿ ಪರ ಸಾಕ್ಷಿಯ ಪಾಟಿ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

1 ನೇ ಪ್ರತಿವಾದಿ ಪರ ವಕೀಲರು ಪಾಟಿ ಸವಾಲಿಗೆ ಕಾಲಾವಕಾಶ ಕೊರಿದ್ದು, ಕಾಲಾವಕಾಶ ನೀಡಲು ಯಾವುದೇ ಸಕಾರಣ ನಿಡದೇ ಇರುವುದರಿಂದ ಅವರ ಮನವಿಯನ್ನು ತಳ್ಳಿ ಹಾಕಿ ಪ್ರತಿವಾದಿಗಳ ಪರ ಸಾಕ್ಷಿಯ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.